**O.S** 103/2018

**PW**–1

ಸಾಕ್ಷಿಗೆ ವಿಧಿಬದ್ಧವಾಗಿ ದಿನಾಂಕ **23.08.2022** ರಂದು ಪ್ರಮಾಣ ಪ್ರಮಾಣ ವಚನವನ್ನು ಬೋಧಿಸಲಾಯಿತು.

<u>ಪಾಟೀ ಸವಾಲುಃ ಪ್ರತಿವಾದಿ ನಂಬರ್ 1 ರಿಂದ 3 ಪರ ವಕೀಲರಾದ ಶ್ರೀ **CRN** ರವರಿಂದ</u>

ನಾನು ಪ್ರತಿವಾದಿಗಳ ವಿರುದ್ಧ ಈ ದಾವೆಯನ್ನು ಜಾಗದ ಸಂಬಂಧ ಆಕಿರುತ್ತೇನೆ. ನನ್ನ ಗಂಡನ ಹೆಸರು ರಾಜಪ್ಪ ಎಂದರೆ ನಿಜ. ರಾಜಪ್ಪನ ತಂದೆಯ ಹೆಸರು ಶಿವಪ್ಪ ದೇವರು. ನನ್ನ ಗಂಡ ನನ್ನ ಮಾವನ ಹಿರಿಯ ಹೆಂಡತಿ ಮಗ. ನನ್ನ ಮಾವನ ಹಿರಿಯ ಹೆಂಡತಿಗೆ ನನ್ನ ಗಂಡ ಒಬ್ಬನೇ ಮಗ. ಆದರೆ ನನ್ನ ಮಾವನ ಕಿರಿಯ ಹೆಂಡತಿಗೆ ಇಬ್ಬರು ಮಕ್ಕಳು ಅವರುಗಳ ಹೆಸರು ಬಸವಣ್ಣ ಮತ್ತು ಮಂಜು.

ಸಾಕಮ್ಮ ನನ್ನ ಗಂಡನ ತಂದೆಯ ತಮ್ಮನ ಹೆಂಡತಿ. ಸಿದ್ಧರಾಮಪ್ಪ ನನ್ನ ಗಂಡನ ತಂದೆಯ ತಮ್ಮನ ಮಗ. ನನಗೆ ದಾವಾ ಆಸ್ತಿಯ ಅಸಸ್‌ಮೆಂಟ್ ಸಂಖ್ಯೆ ಗೊತ್ತಿಲ್ಲ. ದಾವಾ ಆಸ್ತಿಯು ಪೂರ್ವ ಪಶ್ಚಿಮಕ್ಕೆ **24** ಅಡಿ ಹಾಗೂ ಉತ್ತರ ದಕ್ಷಿಣಕ್ಕೆ **33** ಅಡಿ ಇದೆ. ದಾವಾ ಆಸ್ತಿಯು ನನ್ನ ಹೆಸರಿನಲ್ಲಿ ಇದೆ. ಮೊದಲು ದಾವಾ ಆಸ್ತಿಯು ನನ್ನ ಗಂಡನ ತಂದೆಯಾದ ಶಿವಪ್ಪ ದೇವರ ಹೆಸರಿನಲ್ಲಿ ಇತ್ತು ನಾನು ಅವರಿಂದ ನನ್ನ ಹೆಸರಿಗೆ ಮಾಡಿಸಿಕೊಂಡಿರುತ್ತೇನೆ. ನನ್ನ ಹೆಸರಿಗೆ ದಾವಾ ಆಸ್ತಿಯನ್ನು ಮಾಡಿಸಿಕೊಂಡು ಈಗ ಸುಮಾರು **4** ವರ್ಷಗಳು ಆಗಿರಬಹುದು.

ನನ್ನ ಮಾವ ಶಿವಪ್ಪ ದೇವರ ಹೆಸರಿನಲ್ಲಿ ಇದ್ದ ಅಸಸ್‌ಮೆಂಟ್ ದಾಖಲಾತಿಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಅನ್ನಿಸುತ್ತದೆ. ಶಿವಪ್ಪದೇವರ ಹೆಸರಿನಲ್ಲೂ ಕೂಡ ಆಸ್ತಿಯ ವಿಸ್ತೀರ್ಣ **24 x 33** ಅಡಿಗಳು ಇದ್ದವು. ಇದಕ್ಕೆ ಸಂಬಂಧಿಸಿದಂತೆ ನಾನು ನ್ಯಾಯಾಲಯಕ್ಕೆ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ. ದಾವಾ ಆಸ್ತಿಯು ಶಿವಪ್ಪ ದೇವರ ಹೆಸರಿನಲ್ಲಿ ಎಂದಿಗೂ ಸಹ ಇರಲಿಲ್ಲ ಎಂದರೆ ಸಾಕ್ಷಿಯು ಮೊದಲು ಸಾಕಮ್ಮ ರವರ ಹೆಸರಿನಲ್ಲಿ ಇತ್ತು ನಂತರ ಅದು ಶಿವಪ್ಪದೇವರ ಹೆಸರಿಗೆ ಬಂದಿರುತ್ತದೆ ಆನಂತರ ಶಿವಪ್ಪದೇವರ ಹೆಸರಿನಿಂದ ತಮ್ಮ ಹೆಸರಿಗೆ ಬಂದಿರುತ್ತದೆ ಎಂದು ನುಡಿಯುತ್ತಾರೆ. ನಾನು ಹೇಳಿದಂತೆ **24 x 33** ಅಡಿಗಳು ಶಿವಪ್ಪದೇವರ ಹೆಸರಿನಲ್ಲಾಗಲೀ ಅಥವಾ ಸಾಕಮ್ಮ ರವರ ಹೆಸರಿನಲ್ಲಾಗಲೀ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಈ ವಿಸ್ತೀರ್ಣವನ್ನು ಅನಧೀಕೃತವಾಗಿ

ಬರೆಯಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಹಳೇ ಮನೆಯನ್ನು ಕೆಡವಿ ಹಾಕಿ ಹೊಸ ಮನೆಯನ್ನು ಕಟ್ಟುವ ಸಮಯದಲ್ಲಿ ನಾನು ದಾವಾ ಆಸ್ತಿಯನ್ನು ನನ್ನ ಹೆಸರಿಗೆ ಮಾಡಿಸಿಕೊಂಡಿರುತ್ತೇನೆ. ನನ್ನ ಹೆಸರಿಗೆ ದಾವಾ ಆಸ್ತಿಯನ್ನು ಮಾಡಿಕೊಳ್ಳುವ ಸಮಯದಲ್ಲಿ ಯಾವ ದಾಖಲಾತಿಗಳನ್ನು ಪಂಚಾಯಿತಿಗೆ ಕೊಟ್ಟು ಮಾಡಿಸಿಕೊಂಡಿರುತ್ತೇನೆ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಪಶ್ಚಿಮಕ್ಕೆ 1 ನೇ ಪ್ರತಿವಾದಿಯ ಮನೆ, ಉತ್ತರಕ್ಕೆ 1 ನೇ ಪ್ರತಿವಾದಿಯ ಖಾಲಿ ಜಾಗ, ದಕ್ಷಿಣಕ್ಕೆ ರಸ್ತೆ, ಪೂರ್ವಕ್ಕೆ ಸಿದ್ಧರಾಮಪ್ಪ ರವರ ಮನೆ. ಸಿದ್ಧರಾಮಪ್ಪರವರಿಗೆ ಏನು ಆಸ್ತಿ ಬಂದಿದೆ ಅಷ್ಟೇ ಆಸ್ತಿಯು ನನಗೂ ಕೂಡ ಬಂದಿದೆ ಎಂದರೆ ನಿಜ.

ನಾವು ಹಳೆ ಮನೆಯನ್ನು ಕೆಡುವ ಸಮಯದಲ್ಲಿ ಪಂಚಾಯಿತಿಯಿಂದ ಪರವಾನಗಿಯನ್ನು ಪಡೆದುಕೊಂಡಿರುತ್ತೇವೆ. ನಾವು ಹೊಸ ಮನೆಯನ್ನು ಕಟ್ಟುವ ಸಮಯದಲ್ಲಿ ನಾವು ಪಂಚಾಯಿತಿಯಿಂದ ಪರವಾನಗಿಯನ್ನು ಪಡೆದುಕೊಂಡಿರುತ್ತೇವೆ. ನಾನು ಈ ಬಗ್ಗೆ ನ್ಯಾಯಾಲಯಕ್ಕೆ ದಾಖಲಾತಿಯನ್ನು ಹಾಜರುಪಡಿಸಿರುತ್ತೇನೆ. ನಮ್ಮ ಹೊಸ ಮನೆಯ ಪೂರ್ವಕ್ಕೆ ಸಿದ್ಧರಾಮಪ್ಪ ನವರ ಮನೆ ಇದೆ. ನಿಪಿ–6 ರಲ್ಲಿ ಪೂರ್ವಕ್ಕೆ ಸಿದ್ಧರಾಮಪ್ಪ ನವರ ನಿವೇಶನ ಅಂತ ಬರೆದಿರುವುದು ತಪ್ಪು ಇದೆ. ನನ್ನ ವಾದ ಪತ್ರದಲ್ಲಿ ದಾವಾ ಆಸ್ತಿಯ ಪಶ್ಚಿಮಕ್ಕೆ ಪ್ರತಿವಾದಿಗಳ ಖಾಲಿ ನಿವೇಶನ ಇದೆ ಎಂದು ಬರೆದಿರುವುದು ತಪ್ಪು ಇರುತ್ತದೆ. ದಾವಾ ಆಸ್ತಿಯ ಉತ್ತರ ದಿಕ್ಕಿಗೆ ಪ್ರತಿವಾದಿಗಳ ಮನೆ ಇದೆ ಎಂದು ಬರೆಸಿರುವುದು ಕೂಡ ತಪ್ಪಾಗಿರುತ್ತದೆ. ನನ್ನ ಮಾವನಾದ ಶಿವಪ್ಪದೇವರು ಹಾಗೂ ಸಾಕಮ್ಮ ರವರ ಹೆಸರಿನಲ್ಲಿದ್ದ ಅಸಸ್‌ಮೆಂಟ್‌ಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದರೆ ಸತ್ಯಾಂಶ ಹೊರಬರುತ್ತದೆ ಎಂಬ ಕಾರಣದಿಂದ ಅವುಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮಾವ ಶಿವಪ್ಪ ದೇವರ ಹೆಸರಿನಲ್ಲಿ ಪೂರ್ವ ಪಶ್ಚಿಮ ಕೇವಲ 21 ಅಡಿ ಇತ್ತು ಎಂದರೆ ಸರಿಯಲ್ಲ. ಇದನ್ನು ಮರೆ ಮಾಚಿ ನಾನು ಪಂಚಾಯಿತಿ ಅಧಿಕಾರಿಗಳ ಮೇಲೆ ಪ್ರಭಾವ ಬೀರಿ ಪೂರ್ವ ಪಶ್ಚಿಮ 24 ಅಡಿಗಳು ಎಂದು ತಪ್ಪಾಗಿ ನಮೂದಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ನಾನು ಈ ದಾವೆಯನ್ನು ಹೂಡುವ ಪೂರ್ವದಲ್ಲಿ 1 ನೇ ಪ್ರತಿವಾದಿಯು ನನ್ನ ಮೇಲೆ ಒಂದು ದಾವೆಯನ್ನು ಹೂಡಿದ್ದನು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ದಾವೆಯನ್ನು ಸಲ್ಲಿಸಿದ ನಂತರ ನಾನು ಈ ದಾವೆಯನ್ನು ಹೂಡಿರುತ್ತೇನೆ ಎಂದರೆ ನಿಜ. ನಾನು ಈ ದಾವೆಯನ್ನು ಹೂಡುವ ಸಮಯದಲ್ಲಿ ನಾವು ಇನ್ನು ಮನೆಯ ಕೆಲಸವನ್ನು ಶುರು ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಮನೆ ಕೆಲಸವನ್ನು ಮಾಡುತ್ತಿದ್ದುದ್ದಾಗಿ

ನುಡಿಯುತ್ತಾರೆ. ನಾನು ಈ ದಾವೆಯಲ್ಲಿ ಮಧ್ಯಂತರ ಅರ್ಜಿಯ ಮೇರೆಗೆ ತಡೆಯಾಜ್ಞೆಯನ್ನು ಪಡೆದುಕೊಂಡು ನಂತರ ಮನೆ ಕೆಲಸ ಪ್ರಾರಂಭಿಸಿರುತ್ತೇನೆ ಎಂದರೆ ನಿಜ. ನಾವು ಹೊಸ ಮನೆಯನ್ನು ಕಟ್ಟುವ ಪೂರ್ವದಲ್ಲಿ ನಮ್ಮ ಮನೆಗೂ ಮತ್ತು 1 ನೇ ಪ್ರತಿವಾದಿಯ ಮನೆಗೂ ಮಧ್ಯದಲ್ಲಿ ಗಲ್ಲಿ ಇತ್ತು ಎಂದರೆ ನಿಜ. ಸದರಿ ಗಲ್ಲಿಯು ಪೂರ್ವ ಪಶ್ಚಿಮ 4 ರಿಂದ 5 ಅಡಿ ಇತ್ತು ಎಂದರೆ ಸಾಕ್ಷಿಯು ಸುಮಾರು 2 ಅಡಿ ಇರಬಹುದು ಎಂದು ನುಡಿಯುತ್ತಾರೆ. ಹಳೆ ಮನೆಯು ಮಂಗಳೂರು ಹಂಚಿನ ಮನೆಯಾಗಿತ್ತು. ಸದರಿ ಹಳೆ ಮನೆಗೆ 1 ½ ಅಡಿಯಷ್ಟು ಪಶ್ಚಿಮ ದಿಕ್ಕಿಗೆ ಸೂರನ್ನು ಬಿಡಲಾಗಿತ್ತು. 1 ನೇ ಪ್ರತಿವಾದಿಯ ಮನೆಯ ಸೂರೂ ಕೂಡ 1 ½ ಅಡಿಯಷ್ಟು ಇತ್ತು. ನಮ್ಮ ಮನೆಯ ಸೂರಿಗೂ ಮತ್ತು 1 ನೇ ಪ್ರತಿವಾದಿಯ ಮನೆಯ ಸೂರಿಗೂ ಮಧ್ಯ ಜಾಗವಿರಲಿಲ್ಲ. ನಮ್ಮ ಮನೆಯ ಸೂರಿಗೂ ಹಾಗೂ 1 ನೇ ಪ್ರತಿವಾದಿ ಮನೆಯ ಸೂರಿಗೂ ಮಧ್ಯದಲ್ಲಿ ಸುಮಾರು 1 ½ ಅಡಿಗಳ ಅಂತರವಿತ್ತು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಮನೆಯ ಗೊಡೆಗೂ ಮತ್ತು ನಾವು ಈಗ ಕಟ್ಟಿರುವ ಹೊಸ ಮನೆಯ ಗೋಡೆಗೂ ಮಧ್ಯದಲ್ಲಿ ಸುಮಾರು 3 ಅಡಿಗಳ ಅಂತರವಿದೆ.

ನಾವು ಈಗ ನಮ್ಮ ಹೊಸ ಮನೆಯನ್ನು ಉತ್ತರ ದಕ್ಷಿಣಕ್ಕೆ 33 ಅಡಿ ಜಾಗದಲ್ಲಿ ಕಟ್ಟಿರುತ್ತೇವೆ. ನಾವು ಸುತ್ತಾ 1 ½ ಅಡಿ ಜಾಗವನ್ನು ಬಿಟ್ಟು ಮನೆಯನ್ನು ಕಟ್ಟಬೇಕಾಗುತ್ತದೆ ಎಂದರೆ ನಿಜ. ನಾವು ಈಗ ಹೊಸ ಮನೆಯನ್ನು ಸುತ್ತ 1 ½ ಅಡಿ ಜಾಗವನ್ನು ಬಿಟ್ಟೇ ಕಟ್ಟಿರುತ್ತೇವೆ.

(ಈ ಹಂತರದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

23.08.2022.

ಸಿವಿಲ್ ನ್ಯಾಯಾಧೀಶರು ಮತ್ತು

ಪ್ರ.ದ.ನ್ಯಾದ ನ್ಯಾಯಾಲಯ ಯಳಂದೂರು.